ನಮಗಾಗಿರತಕ್ಕಂಥ ಒಪ್ಪಂದವಾಗಿದೆ. ಅಂದರೆ ಅನುಪಾತ 1:2. ಇದನ್ನು ಸರ್ಕಾರದ ಆರ್ಥಿಕ ಪರಿಸ್ಥಿತಿಯ ಆಧಾರದ ಮೇಲೆ ನಾವು ಹಣವನ್ನು ಬಿಡುಗಡೆ ಮಾಡುತ್ತೇವೆ. ನನಗೆ ಇತರ ಆ ಭಾಗದ ಶಾಸಕರುಗಳೂ ಸಹಿತ ಈ ಹರಿಹರ–ಕೊಟ್ಟೂರು ಮಾರ್ಗವನ್ನು ಮಾಡಬೇಕೆಂದು ಬಹಳ ಒತ್ತಾಯ ಮಾಡಿ ಹೇಳಿದ್ದಾರೆ. ಈ ರೈಲು ಮಾರ್ಗ ಮಾಡತಕ್ಕಂಥದ್ದು ಬಹಳ ಬೇಗ ಆಗಬೇಕು ಅನ್ನತಕ್ಕಂಥದ್ದು ನಮ್ಮ ಆಸೆ. ಮಂಗಳೂರು ಪೋರ್ಟಿಗೆ ಇದರಿಂದ connectivity ಸಿಗುತ್ತದೆ ಅನ್ನತಕ್ಕಂಥ ಒಂದು ವಿಚಾರ ಸರ್ಕಾರದ ಗಮನದಲ್ಲಿದೆ. ನಾವು ಕೇಂದ್ರ ಸರ್ಕಾರದ ಮಂತ್ರಿಗಳನ್ನು ಭೇಟಿ ಮಾಡತಕ್ಕಂಥ ಸಂದರ್ಭದಲ್ಲಿ, ಇದಕ್ಕೆ ಆದಷ್ಟು ಬೇಗ ಒಂದು ಡೇಟ್ ಅನ್ನು ಫಿಕ್ಸ್ ಮಾಡಿ, ನಾಲ್ಕು ವರ್ಷವೋ, ಮೂರು ವರ್ಷವೋ ಎಂದು ಫಿಕ್ಸ್ ಮಾಡಿ, ಅದಕ್ಕೆ ತಕ್ಕಂತೆ ಪ್ರತಿವರ್ಷ ಹಣವನ್ನು ಬಿಡುಗಡೆ ಮಾಡಲಿಕ್ಕೆ ಒತ್ತಾಯವನ್ನು ಮಾಡುತ್ತೇನೆ.

ರೇಷ್ಮೆ ಬೆಳೆಗಾರರನ್ನು ಉತ್ತೇಜಿಸಲು ಸರಕಾರದ ಯೋಜನೆಗಳು

511 (5623) : **ಶ್ರೀ ರವಿ ಸಿ. ಟಿ. (ಚಿಕ್ಕಮಗಳೂರು)** : ರೇಷ್ಮೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರೇಷ್ಮೆ ಬೆಳೆಗಾರರನ್ನು ಉತ್ತೇಜಿಸಲು ಸರ್ಕಾರ ರೂಪಿಸಿರುವ ಯೋಜನೆಗಳಾವುವು;

ಆ) ಚಿಕ್ಕಮಗಳೂರು ಜಿಲ್ಲೆಯಲ್ಲಿ ರೇಷ್ಮೆ ಉತ್ಪದನಾ ಪ್ರಮಾಣ ಎಷ್ಟು;

ಇ) ಈ ಜಿಲ್ಲೆಯ ರೇಷ್ಮೆ ಬೆಳೆಯುವ ವಿಸ್ತೀರ್ಣ ಎಷ್ಟು; (ತಾಲ್ಲೂಕುವಾರು ವಿವರ ಒದಗಿಸುವುದು)?

ಶ್ರೀ ಸಿ. ಚನ್ನಿಗಪ್ಪ (ಮಾನ್ಯ ರೇಷ್ಮೆ ಸಚಿವರು) :

ಅ) ರೇಷ್ಮೆ ಬೆಳೆಗಾರರನ್ನು ಉತ್ತೇಜಿಸಲು ಕೆಳಕಂಡ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

ಆ) ರಾಜ್ಯ ಸರ್ಕಾರ ಮತ್ತು ಕೇಂದ್ರ ರೇಷ್ಮೆ ಮಂಡಳಿಯ ಸಹಯೋಗದ ಕೆಟಲಿಟಿಕ ಅಭಿವೃದ್ಧಿ ಕಾರ್ಯಕ್ರಮಗಳು:

1) ಹೊಸ ಹಿಪ್ಪನೇರಳೆ ತಳಿ ಅಭಿವೃದ್ಧಿ–ಕಿಸಾನ್ ನರ್ಸರಿಗೆ ಪ್ರೋತ್ಸಾಹಧನ ರೂ. 50.000/ – ಒಂದು ಲಕ್ಷ ಹಿಪ್ಪನೇರಳೆ ಸಸಿಗಳಿಗೆ,

2) ಹಿಪ್ಪನೇರಳೆ ತೋಟಿಗಳಿಗೆ ಹನಿನೀರಾವರಿ ಘಟಕ ಅಳವಡಿಕೆಗೆ ಸಹಾಯ ಧನ ರೂ. 24.000/– ಒಂದು ಹೆಕ್ಟೇರ್‌ಗೆ,

3) ಪ್ರತ್ಯೇಕ ಹುಳು ಸಾಕುವ ಮನೆಗೆ ಸಹಾಯಧನ ರೂ. 50.000/– 1000 ಚ.ಅ ಮನೆಗೆ, ರೂ. 25.000/– 600 ಚ.ಅ ಮನೆಗೆ, ರೂ 15000/– 375 ಚ.ಅ ಮನೆಗೆ,

4) ರೇಷ್ಮೆ ಹುಳು ಸಾಕುವ ಸಲಕರಣೆಗಳಿಗೆ ಸಹಾಯಧನ ರೂ. 15000/–

5) ರೋಗ ನಿಯಂತ್ರಣಕ್ಕಾಗಿ ಸೋಂಕು ನಿವಾರಕಗಳ ಸರಬರಾಜು,

6) ರೇಷ್ಮೆ ಬೆಳೆಗಾರರಿಗೆ ತರಬೇತಿ ಮತ್ತು ಟೂಲ್‌ಕಿಟ್ಸ್ ನೀಡಿಕೆಗೆ ರೂ.2000/– ಪ್ರತಿ ಶಿಕ್ಷಣಾರ್ಥಿಗೆ,

7) ಚಾಕಿ ಸಾಕಾಣಿಕಾ ಕಟ್ಟಡ ನಿರ್ಮಾಣಕ್ಕೆ ಸಹಾಯಧನ ರೂ.50000/–

8) ಚಾಕಿ ಸಾಕಾಣಿಕಾ ಸಲಕರಣೆಗಳಿಗೆ ಸಹಾಯಧನ ರೂ.100000/–,

9) ಸ್ಥಳೀಯ ಭಾಷೆಗಳಲ್ಲಿ ದೃಶ್ಯ ಮತ್ತು ಪ್ರಚಾರ ಸಾಹಿತ್ಯ ಮುದ್ರಣ.

ಬ) ಇಲಾಖೆಯಿಂದ ನೀಡುತ್ತಿರುವ ಸೌಲಭ್ಯಗಳು

1) ನೂತನ ತಾಂತ್ರಿಕತೆಗಳ ಅನುಸರಣೆಗಾಗಿ ತರಬೇತಿ

2) ಉತ್ತಮ ಗುಣಮಟ್ಟದ ಮೊಟ್ಟೆಗಳ ಸರಬರಾಜು

3) ಬೆಳೆ ಗೂಡುಗಳ ವಿಲೇವಾರಿಗಾಗಿ ಗೂಡು ಮಾರುಕಟ್ಟೆಗಳ ನಿರ್ವಹಣೆ

4) ಬ್ಯಾಂಕುಗಳಿಂದ ಸಾಲ ಸೌಲಭ್ಯ ಪಡೆಯಲು ಸಹಾಯ ಇದಲ್ಲದೆ

ವಿಶೇಷ ಘಟಕ ಯೋಜನೆ / ಗಿರಿಜನ ಉಪಯೋಜನೆ / ಜಿಲ್ಲಾ/ ತಾಲ್ಲೂಕು ಪಂಚಾಯಿತ್ ಯೋಜನೆಗಳಡಿ ಹಿಪ್ಪುನೇರಳೆ ಬೆಳೆಯಲು ಪ್ರೋತ್ಸಾಹ ಧನ ರೂ. 2500/–, ರೇಷ್ಮೆ ಹುಳು ಸಾಕುವ ಮನೆ ನಿರ್ಮಾಣ ಸಹಾಯಧನ ರೂ. 25,000/–, ರೂ. 2500/–ಗಳ ರೇಷ್ಮೆ ಹುಳು ಸಾಕುವ ಸಲಕರಣೆಗಳ ಸರಬರಾಜು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಆ) ಚಿಕ್ಕಮಗಳೂರು ಜಿಲ್ಲೆಯಲ್ಲಿ 2004–05 ನೇ ಸಾಲಿನಲ್ಲಿ 17.446 ಮೆ.ಟನ್ ರೇಷ್ಮೆ ಗೂಡಿನ ಉತ್ಪಾದನೆಯಾಗಿರುತ್ತದೆ.

ಇ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಾರ್ಚ್ 2005ರ ಅಂತ್ಯಕ್ಕೆ ಇದ್ದ ತಾಲ್ಲೂಕುವಾರು ಹಿಪ್ಪುನೇರಳೆ ವಿಸ್ತೀರ್ಣ ಕೆಳಕಂಡಂತಿದೆ.

ಕ್ರ.ಸಂ	ತಾಲ್ಲೂಕು	ಹಿಪ್ಪುನೇರಳೆ ವಿಸ್ತೀರ್ಣ(ಹೆಕ್ಟೇರ್ ಗಳಲ್ಲಿ)
1	ಚಿಕ್ಕಮಗಳೂರು	22.90
2	ಮೂಡಿಗೆರೆ	7.80
3	ಕೊಪ್ಪ	11.00
4	ನರಸಿಂಹರಾಜಪುರ	7.40
5	ಶೃಂಗೇರಿ	3.40
6	ಕಡೂರು	40.50
7	ತರೀಕರೆ	16.00
	ಒಟ್ಟು	**109.00**

ಶ್ರೀ ಸಿ. ಟಿ. ರವಿ :– ಮಾನ್ಯ ಅಧ್ಯಕ್ಷರೇ, ನಾನು ರೇಷ್ಮೆ ಬೆಳೆಗಾರರನ್ನು ಉತ್ತೇಜಿಸಲು ಸರ್ಕಾರ ರೂಪಿಸಿರುವ ಯೋಜನೆಗಳಾವುವು ಎಂದು ಪ್ರಶ್ನೆ ಕೇಳಿದ್ದೆ. ಮಾನ್ಯ ರೇಷ್ಮೆ ಖಾತೆ ಸಚಿವರು ಪುಸ್ತಕದಲ್ಲಿ ಏನು ಪ್ರಿಂಟ್ ಮಾಡಿರುತ್ತಾರೋ, ಅದೆಲ್ಲವನ್ನೂ ಇಲ್ಲಿ ಮತ್ತೊಂದು ಕಾಫಿ ಪ್ರಿಂಟ್ ಮಾಡಿ ನನಗೆ ಕೊಟ್ಟಿದ್ದಾರೆ. ಆದರೆ ಮಾನ್ಯ ಸಚಿವರು, ನನ್ನ ಖಾತೆಗೆ ಮಾನ್ಯ ಹಣಕಾಸಿನ ಸಚಿವರು ಹೆಚ್ಚು ಹಣ ಕೊಡುತ್ತಿಲ್ಲ ಎಂದು ನನಗೆ ಹೇಳಿದ್ದರು. ಈ ಎಲ್ಲಾ ಯೋಜನೆಗಳೇನಿವೆ, ಅದನ್ನು ಅನುಷ್ಠಾನಗೊಳಿಸಲಿಕ್ಕೆ ನಿಮ್ಮ ಬಳಿ ಹಣವಿಲ್ಲ. ನಾನು ನಮ್ಮ ಜಿಲ್ಲೆಗೆ ಸಬ್ಸಿಡಿ ರಿಲೀಸ್ ಮಾಡಬೇಕಾಗಿರುವಂಥಾದ್ದು ಬಾಕಿ ಇದೆ, ಯಾವಾಗ ಅದನ್ನು ರಿಲೀಸ್ ಮಾಡುತ್ತೀರಿ ಎಂದು ಮಾನ್ಯ ಸಚಿವರನ್ನು ಕೇಳಿದೆ. ಆಗ ಸಚಿವರು, ಇನ್ನೂ ಹಣವೇ ಕೊಟ್ಟಿಲ್ಲ ಎಂದು ಮಾನ್ಯ ಹಣಕಾಸಿನ ಸಚಿವರ ಕಡೆಗೆ ಬೊಟ್ಟು ಮಾಡಿ ತೋರಿಸಿದ್ದರು. ಇಲ್ಲೇನು ಹೇಳಿದ್ದಾರೆ, ಹೊಸ ಹಿಪ್ಪುನೇರಳೆ ಅತಿ ಅಭಿವೃದ್ಧಿಗೆ– ಕಿಸಾನ್ ನರ್ಸರಿ – ಮಾಡಲಿಕ್ಕೆ 50 ಸಾವಿರ ರೂಪಾಯಿಗಳ ಪ್ರೋತ್ಸಾಹ ಧನ ಕೊಡುತ್ತೇವೆ,

ಹಾಗೆಯೇ ಹನಿ ನೀರಾವರಿ ಘಟಕ ಅಳವಡಿಕೆ ಮಾಡಲಿಕ್ಕೆ ಒಂದು ಹೆಕ್ಟೇರ್‌ಗೆ 24 ಸಾವಿರ ರೂಪಾಯಿಗಳ ಸಹಾಯ ಧನ ನೀಡುತ್ತೇವೆ, ಪ್ರತ್ಯೇಕ ಹುಳು ಸಾಕುವ ಮನೆಗೆ 50 ಸಾವಿರ ರೂಪಾಯಿಗಳು, 600 ಚದರ ಅಡಿ ಮನೆಗೆ 25 ಸಾವಿರ ರುಪಾಯಿಗಳು, 375 ಚದರ ಅಡಿ ಮನೆಗೆ 15 ಸಾವಿರ ರೂಪಾಯಿಗಳು ಕೊಡುತ್ತೇವೆ, ರೇಷ್ಮೆ ಹುಳು ಸಾಕುವ ಸಲಕರಣೆಗಳಿಗೆ ಸಹಾಯಧನ 15 ಸಾವಿರ ರೂಪಾಯಿಗಳನ್ನು ಕೊಡುತ್ತೇವೆ, ಹಾಗೆಯೇ ರೋಗ ನಿಯಂತ್ರಣಕ್ಕಾಗಿ ಸೋಂಕು ನಿವಾರಕಗಳ ಸರಬರಾಜು ಮಾಡುತ್ತೇವೆ, ರೇಷ್ಮೆ ಬೆಳೆಗಾರರಿಗೆ ತರಬೇತಿ ಮತ್ತು ಟೂಲ್‌ಕಿಟ್ಸ್ ನೀಡಿಕೆಗೆ ಪ್ರತಿ ಶಿಕ್ಷಣಾರ್ಥಿಗೆ 2 ಸಾವಿರ ರೂಪಾಯಿಗಳನ್ನು ಕೊಡುತ್ತೇವೆ, ಚಾಕಿ ಸಾಕಾಣಿಕಾ ಕಟ್ಟಡ ನಿರ್ಮಾಣಕ್ಕೆ 50 ಸಾವಿರ ರೂಪಾಯಿಗಳ ಸಹಾಯಧನ ಕೊಡುತ್ತೇವೆ ಹಾಗೂ ಸಲಕರಣೆಗಳಿಗೆ 1 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ ಹಾಗೂ ಸಲಕರಣೆಗಳಿಗೆ 1 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ, ಅದಲ್ಲದೆ ಸ್ಥಳೀಯ ಭಾಷೆಗಳಲ್ಲಿ ದೃಶ್ಯ ಮತ್ತು ಪ್ರಚಾರ ಸಾಹಿತ್ಯ ಮುದ್ರಣ ಇನ್ನೂ ಬೇರೆ ಬೇರೆ ಉದ್ದಕ್ಕೆ ಪಟ್ಟಿಯಲ್ಲಿ ಹೇಳಿದ್ದಾರೆ. ಇದರಲ್ಲಿ ಚಿಕ್ಕಮಗಳೂರು ಜಿಲ್ಲೆಗೆ ನೀವು ಇದುವರೆಗೂ, ಏನು ರೇಷ್ಮೆ ಬೆಳೆಗಾರರಿಗೆ ತರಬೇತಿ ಮತ್ತು ಟೂಲ್ಸ್‌ಕಿಟ್ ನೀಡಿಕೆ ಮಾಡುತ್ತೇವೆ ಎಂದು ಹೇಳಿದ್ದೀರಲ್ಲಾ, ಎಷ್ಟು ತರಬೇತಿ ನೀಡಿದ್ದೀರಿ ಎನ್ನುವಂತಾದ್ದು ನನ್ನ ಮೊದಲನೇ ಉಪ ಪ್ರಶ್ನೆಯಾಗಿದೆ. ಎರಡನೆಯದು, ನೀವು ಈಗೇನು ಸಬ್ಸಿಡಿ, ಸಹಾಯಧನ ಇತ್ಯಾದಿ ಸೌಲಭ್ಯಗಳ ಬಗ್ಗೆಯೆಲ್ಲಾ ಹೇಳಿದ್ದೀರಲ್ಲಾ, ಇದನ್ನು ನನ್ನ ಜಿಲ್ಲೆಯಲ್ಲಿ ಇದುವರೆಗೂ ಎಷ್ಟು ಜನ ಬೆಳೆಗಾರರಿಗೆ ಉತ್ತೇಜನ ರೂಪದಲ್ಲಿ ಕೊಟ್ಟಿದ್ದೀರಿ? ನನ್ನ ಮೂರನೆಯ ಪ್ರಶ್ನೆ ಏನೆಂದರೆ, ರೇಷ್ಮೆ ಇಲಾಖೆ ಎಂದರೆ, ಅದನ್ನು ನೀವು ಕೇವಲ ಕೋಲಾರ ಜಿಲ್ಲೆ ಮತ್ತು ತುಮಕೂರು ಜಿಲ್ಲೆಗೆ ಮಾತ್ರ ಸೀಮಿತ ಮಾಡಿಕೊಂಡು ಬಿಟ್ಟಿದ್ದೀರಿ. ನಮ್ಮ ಚಿಕ್ಕಮಗಳೂರು ಜಿಲ್ಲೆ ಕಡೆಗೂ ಸ್ವಲ್ಪ ತಲೆ ಹಾಕಿ, ಬನ್ನಿ, ನಿಮಗೆ ನಾವು ಒಳ್ಳೆಯ ಆತಿಥ್ಯವನ್ನೇ ಕೊಡುತ್ತೇವೆ. ರೇಷ್ಮೆ ಬೆಳೆ ಹೇಗೆ ಬೆಳೆಯುವುದು ಎಂಬುದನ್ನು ನಮಗೂ ಹೇಳಿ. ನಮ್ಮ ಜಿಲ್ಲೆಯಲ್ಲಿ 109 ಹೆಕ್ಟೇರ್‌ಗಳಲ್ಲಿ ಹಿಪ್ಪುನೇರಳೆ ಬೆಳೆ ಬೆಳೆಯುತ್ತಾರೆ ಮತ್ತು ಅಲ್ಲಿ 17.446 ಮೆ.ಟನ್ ರೇಷ್ಮೆ ಗೂಡಿನ ಉತ್ಪಾದನೆಯಾಗುತ್ತದೆ ಎಂದು ಇಲ್ಲಿ ಹೇಳಿದ್ದೀರಿ. ದೇವರಾಣೆ ಅಷ್ಟೊಂದು ಆಗುವುದಿಲ್ಲ. ನಿಮ್ಮ ರೇಷ್ಮೆ ಬೆಳೆ ಬೆಳೆಯುವವರು ನಿಮಗೆ ಅಲ್ಲಿ ಹುಡುಕಿದರೂ ಸಿಗುವುದಿಲ್ಲ. ಆದ್ದರಿಂದ, ನೀವು ಅಲ್ಲಿಗೆ ಬಂದು, ಅಲ್ಲಿ ಎಲ್ಲಿ ಬೆಳೆಯುತ್ತಾರೆ ಎಂಬುದನ್ನು ನಮಗೆ ತೋರಿಸಿ, ಅಲ್ಲಿ ತರಬೇತಿ–ಗಿರಬೇತಿ ಮಾಡಿಸಿಕೊಟ್ಟರೆ, ಇನ್ನೊಂದಿಷ್ಟು ಬೆಳೆಗಾರರು ಬೆಳೆ ಬೆಳೆಯುವುದಕ್ಕೆ ಉತ್ತೇಜನ ನೀಡಿದಂತಾಗುತ್ತದೆ. ಹಾಗಾಗಿ ನೀವು ತುಮಕೂರು ಮತ್ತು ಕೋಲಾರಕ್ಕಷ್ಟೇ ಸೀಮಿತವಾಗಬೇಡಿ, ಚಿಕ್ಕಮಗಳೂರಿಗೂ ಬನ್ನಿ. ನಾನು ಮೊದಲೆರಡು ಕೇಳಿದ ಪ್ರಶ್ನೆಗಳಿಗೆ ದಯಮಾಡಿ ಉತ್ತರ ಕೊಡಬೇಕೆಂದು ಮಾನ್ಯ ಉಪಾಧ್ಯಕ್ಷರ ಮೂಲಕ ಸಚಿವರನ್ನು ವಿನಂತಿಸುತ್ತೇನೆ.

ಶ್ರಿ ಸಿ. ಚೆನ್ನಿಗಪ್ಪ :– ಸನ್ಮಾನ್ಯ ಉಪಾಧ್ಯಕ್ಷರೆ, ಸತ್ಯಾಂಶವನ್ನು ಅವರೇ ಬಾಯಿ ಬಿಟ್ಟು ಹೇಳಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಎಷ್ಟರಮಟ್ಟಿಗೆ ರೇಷ್ಮೆ ಬೆಳೆಯನ್ನು ಬೆಳೆದಿದ್ದಾರೆ ಎಂದು ಹೇಳಿದ್ದಾರೆ. 109 ಹೆಕ್ಟೇರ್ ಜಮೀನಿನಲ್ಲಿ ಮಾತ್ರ ರೇಷ್ಮೆಯನ್ನು ಬೆಳೆದಿದ್ದಾರೆ. ಮಾನ್ಯ ರವಿಯವರ ಚಿಕ್ಕಮಗಳೂರು ಜಿಲ್ಲೆಯ 7 ತಾಲ್ಲೂಕುಗಳಲ್ಲಿ ಈ ಒಂದು ರೇಷ್ಮೆ ಬೆಳೆಯನ್ನು ಅವಲಂಬಿಸಿರುವಂತಹ ಒಟ್ಟು 258 ಜನ ರೈತರಿದ್ದಾರೆ. ಆದರೆ ಅವರು ನಮ್ಮಲ್ಲಿ ಇನ್ನೂ ಅದನ್ನು ಹೆಚ್ಚಿಗೆ ಮಾಡಿ ಎಂದು ಕೇಳುತ್ತಿದ್ದಾರೆ. ಅಲ್ಲಿಯ ರೈತರು ಮುಂದೆ ಬಂದರೆ ನಮ್ಮ ಸರ್ಕಾರ ಈಗಿರುವ 258 ಜನ ರೈತರ ಜೊತೆಗೆ, ಇನ್ನೂ

ಐದು ಸಾವಿರ ರೈತರು ಬಂದರೂ ಸಹ ಅವರಿಗೆ ಎಲ್ಲಾ ಸವಲತ್ತು ನೀಡುತ್ತದೆ. ಅವರಿಗೆ ಕೊಡತಕ್ಕಂಥ training ಆಗಬಹುದು, ವೇರಿಂಗ್ ಹೌಸ್ ಆಗಬಹುದು, ಹನಿ ನೀರಾವರಿ ಆಗಬಹುದು ಅಥವಾ ಟೂಲ್ಸ್ ಕಿಟ್ ಆಗಬಹುದು, ಔಷಧಿ ಆಗಬಹುದು, ಆ ಪ್ರತಿಯೊಂದನ್ನೂ ಸರ್ಕಾರ 50 ಪರ್ಸೆಂಟ್ ಕೊಡತಕ್ಕಂಥದ್ದಕ್ಕೆ ನಮ್ಮ ಸರ್ಕಾರ ಚಿಂತನೆ ಮಾಡಿದೆ. ಅಷ್ಟು ಹಣವನ್ನೂ ಬಿಡುಗಡೆ ಮಾಡಿದ್ದೇವೆ. ಇವತ್ತು ಮೈಸೂರು, ಮಂಡ್ಯ, ಕೋಲಾರ, ಬೆಂಗಳೂರು, ತುಮಕೂರು, ಚಿತ್ರದುರ್ಗ, ಬೆಳಗಾವಿ, ಬಿಜಾಪುರ, ಬೀದರ್ ಉತ್ತಮವಾಗಿ ಬೆಳೆ ಬೆಳೆಯತಕ್ಕಂಥ ಜಿಲ್ಲೆಗಳಾಗಿವೆ. ಆದರೆ ಚಿಕ್ಕಮಗಳೂರಿನಲ್ಲಿ ಏನಾಗಿದೆ ಎಂದರೆ, ಮಾನ್ಯ ರವಿಯವರು ಎಲ್ಲಾ ವಿಚಾರಗಳಲ್ಲಿ ಬಹಳ ಬುದ್ಧಿವಂತರು. ನಮ್ಮ ರೈತರು ಇಷ್ಟೊಂದು ಚೆನ್ನಾಗಿ ಬೆಳೆಯುತ್ತಾರೆ ಎಂದು ಹೇಳುತ್ತಾರೆ. ಒಂದು ದಿನ ಮೀಟಿಂಗ್ ಕರೆದು ಅವರನ್ನು motivate ಮಾಡಿ, ಹೆಚ್ಚಿಗೆ ಬೆಳೆ ಬೆಳೆಯಿರಿ ಎಂದು ಅವರು ಹೇಳಿಲ್ಲ. ದಯಮಾಡಿ, ತಮ್ಮ ಮುಖಾಂತರ ವಿನಂತಿ ಮಡುತ್ತೇನೆ, ಮಾನ್ಯ ರವಿಯವರು ಹೆಚ್ಚಿಗೆ ಬೆಳೆಯುವುದಕ್ಕೆ motivate ಮಾಡಬೇಕು. ಎಷ್ಟು ಜನ ಬೆಳೆಯುವುದಕ್ಕೆ ಮುಂದೆ ಬರುತ್ತಾರೋ, ಅಷ್ಟು ಜನಕ್ಕೂ ನಾವು ಸಹಾಯಧನವನ್ನು ಕೊಟ್ಟೇ ಕೊಡುತ್ತೇವೆ, training ಅನ್ನೂ ಕೊಡುತ್ತೇವೆ. Central Government ಕೊಡತಕ್ಕಂಥ ಕೆಟಲಿಟಿಕ್ ಯೋಜನೆ ಏನಿದೆ, ಸಂಶೋಧನಾ ಕೇಂದ್ರಕ್ಕೆ ಕೊಡತಕ್ಕಂಥದ್ದು, ಅದರಲ್ಲಿ ನಮ್ಮ ಹೆಡ್‌ನಲ್ಲಿ ಕೊಡತಕ್ಕಂಥದ್ದು 56 ಕೋಟಿ ರೂಪಾಯಿಗಳ ದುಡ್ಡು ಇವತ್ತು ಇದೆ. ಈ 56 ಕೋಟಿ ರೂಪಾಯಿಗಳನ್ನು, ಇವತ್ತು ಎಲ್ಲಾ ಜಿಲ್ಲೆಗೆ ಕೊಡತಕ್ಕಂಥ ಬೋನಸ್ಸು ಆಗಬಹುದು, ಸಬ್ಸಿಡಿ ಆಗಬಹುದು, ಅದನ್ನು ನಮ್ಮ ಇಲಾಖೆ ಅಧಿಕಾರಿಗಳು ಒಂದು ರೂಪಾಯಿ balance ಇಲ್ಲದೆ, 31ನೇ ಮಾರ್ಚ್‌ವರೆಗಿನ ಎಲ್ಲಾ ಚೆಕ್ಕನ್ನು ರೈತರ ಮನೆ ಬಾಗಿಲಿಗೆ ಕಳುಹಿಸಿದೆ. ಮಾನ್ಯ ರವಿಯವರು ಹೇಳಿದಂತಹ ಮಿಕ್ಕ ಕೆಲಸವನ್ನು ಹಂತ ಹಂತವಾಗಿ ತೆಗೆದುಕೊಳ್ಳುತ್ತೇವೆ. ನಮ್ಮದು ರೈತರ ಪರ ಸರ್ಕಾರ, ರೈತರಿಗೋಸ್ಕರ ಸರ್ಕಾರ, ರೈತರ ಸರ್ಕಾರ ಎನ್ನುವುದನ್ನು ನಾನು ತಮ್ಮ ಮೂಲಕ ತಿಳಿಸಲಿಕ್ಕೆ ಇಷ್ಟಪಡುತ್ತೇನೆ.

ಶ್ರಿ ಆರ್. ಅಶೋಕ್ :– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳು ನಮ್ಮ ಖಾತೆಯಲ್ಲಿ ಬಹಳಷ್ಟು ದುಡ್ಡಿದೆ, ಯಾವುದೂ ಬಾಕಿ ಇಲ್ಲ, ಎಲ್ಲರ ಮನೆ ಬಾಗಿಲಿಗೆ ಕಳುಹಿಸಿದ್ದೇವೆ ಎಂದು ಹೇಳಿದರು. ಒಂದು ಮಾತನ್ನು ಹೇಳಬಯಸುತ್ತೇನೆ. ಕನಕಪುರ ರಸ್ತೆಯಲ್ಲಿ ರೇಷ್ಮೆ ಸಂಶೋಧನಾ ಕೇಂದ್ರವೊಂದಿದೆ. ಕಳೆದ ಮೂರು ವರ್ಷಗಳಿಂದ ಅಲ್ಲಿರುವವರಿಗೆ ಸಂಬಳ ಕೊಡಲಿಕ್ಕೆ ಇವರಿಂದಾಗಿಲ್ಲ. ಅಲ್ಲಿ 46 ವಿಜ್ಞಾನಿಗಳು ಕೆಲಸ ಮಾಡುತ್ತಿದ್ದಾರೆ. ರೇಷ್ಮೆ ತಳಿ ಯಾವುದನ್ನು ಬೆಳೆಯಬೇಕು? ಮೊಟ್ಟೆಯಿಂದ ಯಾವ ರೀತಿ ತಳಿ ಬರಬೇಕೆಂದು ಈ ವಿಜ್ಞಾನಿಗಳು ಅಲ್ಲಿ ಸಂಶೋಧನೆ ಮಾಡುತ್ತಾರೆ. ಕಳೆದ 3 ವರ್ಷಗಳಿಂದ ಅವರಿಗೆ ಎಂಟೆಂಟು ತಿಂಗಳು ಮಾತ್ರ ಸಂಬಳವನ್ನು ಕೊಡುತ್ತಿದ್ದಾರೆ. ಬುದ್ಧಿವಂತರಾದ ಅವರೇನು ಮಡುತ್ತಿದ್ದಾರೆ ಎಂದರೆ, ಕಳೆದ ಮೂರು ವರ್ಷಗಳಿಂದ ಸಂಶೋಧನೆಗೆಂದು ಏನೊಂದು ಹಣವನ್ನು ಕೊಡುತ್ತಿದ್ದಾರೋ ಅದನ್ನೇ ಸಂಬಳಕ್ಕೆ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ನನ್ನ ಹತ್ತಿರ ಅದರ ಬಗ್ಗೆ ಡೀಟೈಲ್ಸ್ ಇದೆ. ಪ್ರತಿ ವರ್ಷ ಅವರು ಅದನ್ನು ಸಂಬಳಕ್ಕೇ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಇನ್ನು ಅವರು ಸಂಶೋಧನೆ ಮಾಡುವುದೆಲ್ಲಿಂದ ಬಂತು? ರೈತರಿಗೆ ಹೊಸ ತಳಿ ಕೊಡುವುದು ಎಲ್ಲಿಂದ? ವಿಸ್ತರಣೆ ಮಾಡುವುದು ಎಲ್ಲಿಂದ? ಅದಕ್ಕಾಗಿಯೇ ನಾನು ಹೇಳುತ್ತಿದ್ದೇನೆ, ಮಾನ್ಯ ಚೆನ್ನಿಗಪ್ಪನವರ ಖಾತೆಯಲ್ಲಿ ಹಣದ ಕೊರತೆ ಇದೆ. ಅವರೇ ಒಮ್ಮೆ ಪ್ರೆಸ್ ಮೀಟ್ ಮಾಡಿ, ನನ್ನ ಇಲಾಖೆಯಲ್ಲಿ ಕೊರತೆ ಇದೆ ಎಂದು ಹೇಳಿದ್ದರು. ಅದಕ್ಕಾಗಿ ನಾನು ಮಾನ್ಯ ಸಚಿವರನ್ನು

ಆಗ್ರಹ ಮಾಡುತ್ತಿದ್ದೇನೆ. ಪ್ರತಿ ವರ್ಷ ಅವರಿಗೆ 12 ತಿಂಗಳೂ ಸಂಬಳ ಕೊಡುವಂತಹ ವ್ಯವಸ್ಥೆಯಾಗಬೇಕು. ಕಳೆದ ಮೂರು ವರ್ಷಗಳಿಂದ ಅವರಿಗೆ 12 ತಿಂಗಳೂ ಸಂಬಳ ಕೊಟ್ಟಿಲ್ಲ. ಅವರಿಗೆ 12 ತಿಂಗಳೂ ಸಂಬಳ ಕೊಡುವಂತಹ ವ್ಯವಸ್ಥೆ ಮಾಡಬೇಕೆಂದು ಆಗ್ರಹಿಸುತ್ತೇನೆ.

ಶ್ರೀ ಸಿ. ಟಿ. ರವಿ :– ನನ್ನ ಕ್ಷೇತ್ರದಲ್ಲಿ ಏಳು ವರ್ಷದ ಸಬ್ಸಿಡಿ ಬಾಕಿ ಇದೆ.

ಶ್ರೀ ಅರಗ ಜ್ಞಾನೇಂದ್ರ :– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳಲ್ಲಿ ಕೇಳುತ್ತೇನೆ, ಚಿಕ್ಕಮಗಳೂರು ಜಿಲ್ಲೆ ಇರಬಹುದು, ಶಿವಮೊಗ್ಗ ಜಿಲ್ಲೆಯ ಮಲೆನಾಡು ಪ್ರದೇಶ ಇರಬಹುದು, ರೇಷ್ಮೆ ಅತ್ಯಂತ ಉತ್ಕೃಷ್ಟವಾದ ಬೆಳೆ ಬರುತ್ತಿದೆ. ತೀರ್ಥಹಳ್ಳಿ ಹಾಗೂ ಹೊಸ ನಗರಗಳನ್ನು ಹಿಂದೆ ಸೀಡ್ ಏರಿಯಾ ಎಂದು ಮಾಡಿದ್ದರು. ನಿಮ್ಮ ಮಾರುಕಟ್ಟೆ ಸರಿ ಇಲ್ಲ, ನಿಮ್ಮ ವ್ಯವಸ್ಥೆ ಸರಿ ಇಲ್ಲ, ಸಣ್ಣ ಸಣ್ಣ ರೈತರಿಗೆ ಈ ಬೆಳೆ ವರದಾನವಾಗಿದೆ. ಅರ್ಧ ಎಕರೆ, ಒಂದು ಎಕರೆ ಮತ್ತು ಎರಡು ಎಕರೆ ಭೂಮಿ ಇಟ್ಟುಕೊಂಡಂತಹ ರೈತರಿಗೆ ಇದು ವರದಾನ. ಆದರೆ ನಿಮ್ಮ ವ್ಯವಸ್ಥೆಗಳು ಸರಿ ಇಲ್ಲದೆ ಇರುವುದರಿಂದ, ನಿಮ್ಮ ಸರ್ಕಾರಿ ಅಧಿಕಾರಿಗಳು ಸರಿ ಇಲ್ಲದೆ, ಮತ್ತು ನಿಮ್ಮಲ್ಲಿ ಅನುದಾನ ಇಲ್ಲದೆ ಇರುವುದರಿಂದ ಅವೆಲ್ಲಾ ಕೆಳಗೆ ಬಿದ್ದು ಹೋಗಿವೆ. ಶಿವಮೊಗ್ಗದಲ್ಲಿ ಮಾರುಕಟ್ಟೆ ಮಾಡಿದಿರಿ, ಅದೆಲ್ಲಾ ಹಾಳಾಗಿ ಬಿದ್ದಿದೆ. ಈ ರೇಷ್ಮೆ ಇಲಾಖೆಗೆ ಕಾಯಕಲ್ಪ ನೀಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಚನ್ನಿಗಪ್ಪ :– ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಅಶೋಕ್‌ರವರು ಮತ್ತು ನಮ್ಮ ಅರಗ ಜ್ಞಾನೇಂದ್ರರವರು ಕೇಳಿದ ಪ್ರಶ್ನೆ ನಿಜವಾಗಿ ರೈತರಿಗೆ ಬೇಕಾದುದು. ಆದರೆ ಅವರು ಮತ್ತು ಮಾನ್ಯ ರವಿಯವರು ಹೇಳುತ್ತಿರುವ ಮಾತು ಸಬ್ಸಿಡಿ ಮತ್ತು ಬೋನಸ್‌ಅನ್ನು ಇನ್ನೂ ಏಳು ತಿಂಗಳುಗಳಿಂದ ಎಂಟು ತಿಂಗಳಿಂದ ಏನೆಲ್ಲಾ ಹೇಳುತ್ತಾರಲ್ಲಾ ಮಾರ್ಚ್ 31 ರವರೆಗೆ ಒಂದು ರೂಪಾಯಿ ಬ್ಯಾಲೆನ್ಸ್ ಇದ್ದರು ನಾನು ಇವತ್ತು ರಾಜೀನಾಮೆ ಕೊಡುತ್ತೇನೆ. ಮಾರ್ಚ್ 31 ರವರೆಗೆ ಒಂದು ರೂಪಾಯಿ ಬ್ಯಾಲೆನ್ಸ್ ಇಲ್ಲದೆ ಎಲ್ಲಾ ರೈತರ ಮನೆಗೆ ಚೆಕ್ ಬರೆದು ಮನೆ ಮನೆಗೆ ಕಳುಹಿಸಿಕೊಡುತ್ತೇವೆ. ಎರಡನೆಯದು ನೀವು ಹೇಳುವುದು ಸತ್ಯ ಇದೆ. ಡಿಸಿಹೆಚ್ ಸೆಂಟರ್‌ಗೆ ಸಂಬಳ ಕೊಟ್ಟಿರಲಿಲ್ಲ. ನಾಲ್ಕೂವರೆ ವರ್ಷಗಳಲ್ಲಿ ಈ ರೇಷ್ಮೆಗೆ ಬಜೆಟ್‌ನಲ್ಲಿ ಇದ್ದ ಹಣ ಮೂರೂವರೆ ಕೋಟಿ ರುಪಾಯಿಗಳು. ಇವತ್ತು ನಮ್ಮ ಮಾನ್ಯ ಹಣಕಾಸಿನ ಸಚಿವರು ಮುಖ್ಯಮಂತ್ರಿಗಳ ಆದೇಶದ ಮೇರೆಗೆ ನಮಗೆ 56 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಕೊಟ್ಟರು. ಉಗಾದಿ ಹಬ್ಬ ಮೂರು ದಿನ ಇರುವ ಹಾಗೆ ಅವರು ಬಂದು ಕೇಳಿಕೊಂಡರು ನಮಗೆ ಸ್ಯಾಲರಿ ಕೊಟ್ಟಿಲ್ಲ ಎಂದು ಅವತ್ತು ಸಾಯಂಕಾಲ ಐದು ಗಂಟೆಯಲ್ಲಿ ನಾನು ಮಾನ್ಯ ಹಣಕಾಸು ಸಚಿವರಲ್ಲಿ ವಿನಂತಿ ಮಾಡಿಕೊಂಡೆ, ಬೆಳಿಗ್ಗೆ 11.00 ಗಂಟೆಗೆ ಚೆಕ್ ಹೋಯಿತು, ನಾಲ್ಕು ಗಂಟೆಗೆ ಎಲ್ಲರಿಗೂ ಸಂಬಳ ಕೊಟ್ಟಿದ್ದೇವೆ. ಒಂದೇ ಒಂದು ರೂಪಾಯಿ ಸಂಬಳ ಬಾಕಿ ಇದ್ದರೆ ನಾನು ರಾಜೀನಾಮೆ ಕೊಡುತ್ತೇನೆ. ಮತ್ತೆ ಈ ಸದನಕ್ಕೆ ಮಂತ್ರಿಯಾಗಿ ಬರುವುದಿಲ್ಲ. ದಯಮಾಡಿ ಆ ಬಗ್ಗೆ ಚಿಂತನೆ ಮಾಡಬೇಕು. ತಾವು ಏನು ಗೈಡೆನ್ಸ್ ನಮಗೆ ಕೊಡುತ್ತೀರಿ ನಾವು ಅದನ್ನು ಫಾಲೋ ಮಾಡುತ್ತೇವೆ. ಅಭಿವೃದ್ಧಿ ವಿಚಾರದಲ್ಲಿ ಈ ಸರ್ಕಾರ ಎಂದೆಂದಿಗೂ ರೈತರಿಗೆ ಅನ್ಯಾಯ ಮಾಡುವುದಿಲ್ಲ ಎನ್ನುವ ಮಾತನ್ನು ಮಾನ್ಯ ಅಧ್ಯಕ್ಷರ ಮೂಲಕ ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಆರ್. ಅಶೋಕ್ :– ಮಾನ್ಯ ಮಂತ್ರಿಗಳಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಕಳೆದ ಮೂರು ವರ್ಷಗಳಿಂದ ಕೊಟ್ಟಿರಲಿಲ್ಲ ಈಗ ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ, ಅದಕ್ಕೋಸ್ಕರ

ಶ್ರೀ ಹೆಚ್. ಡಿ. ಬಸವರಾಜ್ :– ಸನ್ಮಾನ್ಯ ಸಚಿವರಿಗೆ ಹೆಚ್ಚಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದರೆ ಇನ್ನು ಚೆನ್ನಾಗಿ ಮಾತನಾಡುತ್ತಿದ್ದರೊ ಏನೋ, ನನಗೆ ಅವರು ಆ ಅವಕಾಶ ಕಳೆದುಕೊಂಡರಲ್ಲಾ ಎಂಬ ನೋವು.

ಬಾಗಲಕೋಟೆ ಕ್ಷೇತ್ರದಲ್ಲಿನ ಪಶುಸಂಗೋಪನಾ ಕೇಂದ್ರಗಳಿಗೆ ಪಶುವೈದ್ಯಕೀಯ ಔಷಧಿಗಳ ಸರಬರಾಜು ವ್ಯವಸ್ಥೆ

513 (6106) : **ಶ್ರೀ ಚರಂತಿಮಠ್ ವೀರಣ್ಣ ಚಂದ್ರಶೇಖರಯ್ಯ (ಬಾಗಲಕೋಟೆ)** : ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಾಗಲಕೋಟೆ ಕ್ಷೇತ್ರ ವ್ಯಾಪ್ತಿಯಲ್ಲಿರುವ ಪಶುಸಂಗೋಪನಾ ಕೇಂದ್ರಗಳಲ್ಲಿ ಪಶುಸಂಗೋಪನಾ ಔಷಧಿಗಳ ಸರಬರಾಜಿನಲ್ಲಿ ಕೊರತೆ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಸೂಕ್ತ ಪ್ರಮಾಣದಲ್ಲಿ ಔಷಧಿಗಳ ಪೂರೈಕೆಗೆ ಸರ್ಕಾರದ ಕ್ರಮಗಳೇನು?

ಇ) ಉತ್ತರ ಕರ್ನಾಟಕದ ಜಾನುವಾರು ತಳಿಸಂವರ್ಧನೆಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಈ) ಪಶುಸಂಗೋಪನಾ ಇಲಾಖೆಯವರು ಪ್ರಸಕ್ತ ಸಾಲಿನಲ್ಲಿ ಬಾಗಲಕೋಟೆ ಕ್ಷೇತ್ರ ವ್ಯಾಪ್ತಿಯಲ್ಲಿ ಕೈಗೊಂಡ ಪಶುಅಭಿವೃದ್ಧಿ ಕಾರ್ಯಕ್ರಮಗಳ ವಿವರಗಳೇನು?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಮಾನ್ಯ ಪಶುಸಂಗೋಪನೆ ಮತ್ತು ವಕ್ಫ್ ಸಚಿವರು) :

ಅ) – ಬಂದಿದೆ –

ಆ) ಔಷಧಿ ಖರೀದಿಗಾಗಿ ಅನುದಾನವನ್ನು ರೂ. 575 ಲಕ್ಷದಿಂದ ಪ್ರಸಕ್ತ ಸಾಲಿನಲ್ಲಿ ರೂ. 660 ಲಕ್ಷಗಳಿಗೆ ಹೆಚ್ಚಿಸಲಾಗಿದೆ.

2005–06ನೇ ಸಾಲಿನಲ್ಲಿ ಮೊದಲನೆಯ ಅರ್ಧ ವರ್ಷಕ್ಕೆ ರೂ. 302 ಲಕ್ಷಗಳ (ತೆರಿಗೆ ಹೊರತುಪಡಿಸಿ) ಔಷಧಿ ಸರಬರಾಜಿಗೆ ಈಗಾಗಲೇ ಬೇಡಿಕೆ ನೀಡಿದ್ದು, ಸದ್ಯದಲ್ಲಿ ಸರಬರಾಜಾಗಲಿದೆ. ಇದರಲ್ಲಿ ಬಾಗಲಕೋಟೆ ಕ್ಷೇತ್ರಕ್ಕೆ ಸಲ್ಲಬೇಕಾದ ಭಾಗವು ಸಹ ಸದ್ಯದಲ್ಲೆ ಸರಬರಾಜು ಆಗಲಿದೆ.

ಇ) 1. ಉತ್ತರ ಕರ್ನಾಟಕ ಭಾಗದ ಮುನಿರಾಬಾದ್ ಮತ್ತು ಧಾರವಾಡದಲ್ಲಿ ಇರುವ ಘನೀಕೃತ ವೀರ್ಯ ಉತ್ಪನ್ನ ಕೇಂದ್ರಗಳಲ್ಲಿ ಉತ್ತಮ ಗುಣಮಟ್ಟದ ಘನೀಕೃತ ವೀರ್ಯ ಉತ್ಪಾದಿಸಿ, ಈ ಭಾಗದ ಜಾನುವಾರುಗಳ ತಳಿ ಸಂವರ್ಧನೆಗೆ ಸರಬರಾಜು ಮಾಡಲು ಬಲಪಡಿಸಲಾಗಿದೆ.

2. ಉತ್ತರ ಕರ್ನಾಟಕದ ಎಲ್ಲಾ ಜಿಲ್ಲೆಗಳ 600 ಕೃತಕ ಗರ್ಭಧಾರಣ ಕಾರ್ಯಕರ್ತರಿಗೆ ಉನ್ನತ ತರಬೇತಿಯನ್ನು ನೀಡಿ, ಜಾನುವಾರು ಅಭಿವೃದ್ಧಿಗೆ ಪರಿಣಿತ ಸೇವೆಯು ದೊರಕುವಂತೆ ಮಾಡಲಾಗಿದೆ.

3. ಉತ್ತರ ಕರ್ನಾಟಕ್ಕ ಕೃತಕ ಗರ್ಭಧಾರಣ ಕೇಂದ್ರಗಳಿಗೆ 3 ಲೀಟರ್ ಸಾಮರ್ಥ್ಯದ 1265 ದ್ರವಸಾರಜನಕ ಜಾಡಿಗಳನ್ನು, 34 ಲೀಟರ್ ಸಾಮರ್ಥ್ಯದ 424 ದ್ರವಸಾರಜನಕ ಜಾಡಿಗಳನ್ನು, 500 ಲೀಟರ್ ಸಾಮರ್ಥ್ಯದ 5 ಜಾಡಿಗಳನ್ನು ಒದಗಿಸಿ, ರೈತನ ಮನೆ ಬಾಗಿಲಿಗೆ ಕೃತಕ ಗರ್ಭಧಾರಣೆ